





ಮಾಡುವ ಗಗನಯಾತ್ರಿಗಳ ಮೇಲೆ ಹೇಗೆ ಪ್ರಭಾವ ಬೀರಬಲ್ಲುದು, ಅಷ್ಟೇ ಅಲ್ಲ, ಮಾನವ ನಿರ್ಮಿತ ಉಪಗ್ರಹಗಳು ಮತ್ತು ರೇಡಿಯೋ ಸಿಗ್ನಲ್‌ಗಳ ಕಾರ್ಯಾಚರಣೆ ಯಲ್ಲಿಯೂ ಹೇಗೆ ಅವು ಅಡ್ಡಿ ಯಾಗಬಲ್ಲದು ಎಂಬುದನ್ನು ಕಂಡುಕೊಳ್ಳಬಹುದು.

ಸೂರ್ಯನ ಕರೋನದ ಮೂಲಕ ಶಕ್ತಿ ಮತ್ತು ಶಾಖ ಚಲಿಸುವ ಜಾಡನ್ನು ಗುರುತಿಸುವುದು ಮತ್ತು ಸೌರಮಾರುತ ಮತ್ತು ಸೌರ ಶಕ್ತಿಯುತ ಕಣಗಳು ಹೇಗೆ ವೇಗವರ್ಧನೆಯನ್ನು ಪಡೆಯುತ್ತವೆ ಎಂಬುದನ್ನು ಸಂಶೋಧಿಸುವುದು ಈ ಅನ್ವೇಷಕ ನೌಕೆಯ ಮುಖ್ಯ ವೈಜ್ಞಾನಿಕ ಗುರಿಗಳಾಗಿವೆ. ನಾಸಾ ಈ ಮಿಷಿನ್‌ಅನ್ನು ಒಂದು ಮಹತ್ವದ ಯೋಜನೆಯೆಂದು ಪರಿಗಣಿಸಿ ಇದರ ಆಗುಹೋಗುಗಳನ್ನು ಜಗತ್ತಿನ ಜನರೊಂದಿಗೆ ಹಂಚಿಕೊಳ್ಳಲು ಒಂದು ವೆಬ್ತಾಣವನ್ನು ರೂಪಿಸಿದೆ. ಅದರ ಸಂಪರ್ಕ: http://parkersolarprobe. jhuapl.edu ಅಲ್ಲಿ ಇರುವ ಒಂದು ಡಿಜಿಟಲ್ ಗಡಿಯಾರ ಪಾರ್ಕರ್ ಸೋಲಾರ್ ಪ್ರೋಬ್‌ನ ಉಡಾವಣೆಗೆ ಇಂತಿಷ್ಟು ತಿಂಗಳು, ದಿನ, ಗಂಟೆ, ನಿಮಿಷ ಮತ್ತು ಸೆಕೆಂಡು ಉಳಿದಿವೆ ಎಂಬ ವಾಸ್ತವ ಇಳಿಕ್ಷಣಗಣನೆಯನ್ನೂ ತೋರಿಸುತ್ತದೆ. ಇಲ್ಲಿ ಯೋಜನೆಯ ಬಗ್ಗೆ ಹಲವಾರು ಮಾಹಿತಿ, ಫೋಟೋ, ವಿಡಿಯೋ ಇತ್ಯಾದಿ ಲಭ್ಯ.

## ವಿಜ್ಞಾನಿಗೆ ಸಂದ ಗೌರವ

ಈ ಅನ್ವೇಷಕ ರೋಬಟ್ ನೌಕೆಯ ಹೆಸರು ಮೊದಲು ನಾಸಾ ಸೋಲಾರ್ ಪ್ರೋಬ್ ಪ್ಲಸ್ ಎಂದಿತ್ತು. ಚಿಕಾಗೋ ವಿಶ್ವವಿದ್ಯಾಲಯದ ಖಭೌತವಿಜ್ಞಾನ ವಿಭಾಗದ ಎಸ್.ಚಂದ್ರಶೇಖರ್ ಡಿಸ್ಟಿಂಗ್ವಿಷ್ಡ್ ಸರ್ವಿಸ್ ಪ್ರೊಫೆಸರ್ ಇಮೆರಟಸ್ ಎಂಬ ಪ್ರತಿಷ್ಠಿತ ಹುದ್ದೆಯಲ್ಲಿ ಕೆಲಸ ಮಾಡುತ್ತಿರುವ ಯುಜಿನ್ ಪಾರ್ಕರ್ ಎಂಬ ಪ್ರಸಿದ್ಧ ಖಭೌತವಿಜ್ಞಾನಿಯನ್ನು ಗೌರವಿಸುವ ಸಲುವಾಗಿ ನೌಕೆಯ ಹೆಸರನ್ನು ಪಾರ್ಕರ್ ಸೋಲಾರ್ ಪ್ರೋಬ್ ಎಂದು ಪುನರ್ನಾಮಕರಣ ಮಾಡಲಾಗಿದೆ. ಇಂಥ ಪ್ರಾಯೋಗಿಕ ಯೋಜನೆಗೆ ಜೀವಂತ ವ್ಯಕ್ತಿಯ ಹೆಸರನ್ನು ನಾಸಾ ಇರಿಸಿದ್ದು ಇದೇ ಮೊದಲು. ಈ ಅಧ್ಯಯನ ಪೀಠಕ್ಕೆ ಹೆಸರು ಭಾರತ ಸಂಜಾತ ಸುಬ್ರಹ್ಮಣ್ಯನ್ ಚಂದ್ರಶೇಖರ್ ಅವರದು. ಅವರು ಈಗ ಪಾಕಿಸ್ತಾನದಲ್ಲಿರುವ ಲಾಹೋರಿನಲ್ಲಿ ಜನಿಸಿ ಅಮೆರಿಕದಲ್ಲಿ ಸಂಶೋಧನೆ ನಡೆಸಿ ಜಾಗತಿಕ ಮಟ್ಟದ ಖಭೌತವಿಜ್ಞಾನಿಯಾಗಿದ್ದವರು; ಭೌತವಿಜ್ಞಾನದ ಸಂಶೋಧನೆಗಾಗಿ ನೊಬೆಲ್ ಬಹುಮಾನ ಮತ್ತು ಭಾರತದ ಪದ್ಮ ವಿಭೂಷಣ ಪ್ರಶಸ್ತಿಗೆ ಭಾಜನರಾದವರು (ಇನ್ನೊಬ್ಬ ನೊಬೆಲ್ ಬಹುಮಾನ ವಿಜೇತ ಸರ್ ಸಿ.ವಿ.ರಾಮನ್ ಇವರ ಚಿಕ್ಕಪ್ಪ) ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಈಗ ಕೊನೆಯಲ್ಲಿ ಮತ್ತೆ ಟಿಕೆಟ್‌ಗೆ ಬರೋಣ. ಹೌದು. ಇದೇ ಜುಲೈ 31ರಂದು ಸೂರ್ಯಾಭಿಮುಖವಾಗಿ ನಭಕ್ಕೆ ಏರಲಿರುವ ಪಾರ್ಕರ್ ಸೋಲಾರ್ ಪ್ರೋಬ್ ಬಾಹ್ಯಾಕಾಶ ನೌಕೆಯಲ್ಲಿ ಉಳಿದೆಲ್ಲಾ ಉಪಕರಣಗಳ ಜೊತೆ ಒಂದು ಮೈಕ್ರೋ ಚಿಪ್‌ಅನ್ನು ಇಡಲಾಗುತ್ತದೆ. ಅದರಲ್ಲಿ ಮಾನವರ ಹೆಸರುಗಳನ್ನು ಸೇರಿಸಲು ಇಡೀ ಜಗತ್ತಿನಿಂದ ಹೆಸರುಗಳನ್ನು ಆಹ್ವಾನಿಸಲಾಗಿದೆ. ಬಯಸಿದರೆ ಅದರಲ್ಲಿ ನಿಮ್ಮ ಹೆಸರನ್ನೂ ಸೇರಿಸಬಹುದು. ನೀವು http://go.nasa.gov/HotTicket ವೆಬ್ತಾಣಕ್ಕೆ ಹೋಗಿ. ಹೆಸರನ್ನು ನೋಂದಾಯಿಸುವ ಮಾರ್ಗವನ್ನು ಅದು ತೋರಿಸುತ್ತಾ ಹೋಗುತ್ತದೆ. ಹತ್ತು ನಿಮಿಷದ ಒಳಗೆ ಆ ಐತಿಹಾಸಿಕ ಮೈಕ್ರೋಚಿಪ್ ಮೇಲೆ ನಿಮ್ಮ ಹೆಸರು ಸೇರಿರುವುದಕ್ಕೆ ದ್ಯೋತಕವಾಗಿ ನಿಮ್ಮ ಹೆಸರು ಇರುವ ಒಂದು ಸುಂದರವಾದ ಪ್ರಮಾಣಪತ್ರ ನಿಮ್ಮ ಇಮೇಲ್‌ನಲ್ಲಿ ನಿಮಗೆ ತಲುಪುತ್ತದೆ. ಹೆಸರನ್ನು ನೋಂದಾಯಿಸಲು ಕೊನೆಯ ದಿನ ಇದೇ ಏಪ್ರಿಲ್ 27. ಹೊರಡಿ, ನೋಂದಾಯಿಸಿಕೊಳ್ಳಿ. ಸೂರ್ಯಶಿಕಾರಿಗೆ ಹೊರಟಿರುವ ಸವಾರಿಯಲ್ಲಿ ನನ್ನೊಂದಿಗೆ ನೀವೂ ಏರಿ.